Date :01-06-2016

quickmarketreports.com

# 20 ಸಾವಿರ ಟನ್ ಮುಟ್ಟಿದ ಕೇಂದ್ರ ಸರಕಾರದ ಈರುಳ್ಳಿ ಸಂಗ್ರಹ

ಬೆಲೆ ಏರಿಕೆ ಸಾಧ್ಯತೆಗೆ ಮುನ್ನೆಚ್ಚರಿಕೆ ಕ್ರಮವಾಗಿ ಕೇಂದ್ರ ಸರಕಾರ ನೋಡಲ್ ಏಜೆನ್ಸಿಗಳು ಹಾಘೂ ಎಸ್‌ಎಫ್‌ಸಿ ಮೂಲಕ ಖರೀದಿಸಿ ಸಂಗ್ರಹಿಸಿದ ಈರುಳ್ಳಿ 20 ಸಾವಿರ ಟನ್ ತಲುಪಿದೆಯೆನ್ನಲಾಗಿದೆ. ಹಿಂದಿನ ವರ್ಷ ಕೇಂದ್ರ ಸರಕಾರದ ಈರುಳ್ಳಿ ಸಂಗ್ರಹ 8 ಸಾವಿರ ಟನ್‌ಗಳಾಗಿದ್ದು ಖಾರಿಫ್ ಬೆಳೆಯ ಮೊದಲು ದರ ಕೆ.ಜಿ. ಗೆ ರೂ.80 ರಿಂದ 90 ವರೆಗೆ ಏರಿಕೆಯಾದಾಗ ಮಾರಾಟ ಮಾಡಲಾಗಿತ್ತು.

ಈ ಋತುವಿನಲ್ಲಿ ರಾಬಿ ಬೆಳೆಯಿಂದ ನಿಗದಿತ ಸಮಯದೊಳಗೆ 15 ಸಾವಿರ ಟನ್ ಈರುಳ್ಳಿ ಖರೀದಿಸಲು ಕೇಂದ್ರ ಸರಕಾರ ಯೋಚಿಸಿತ್ತು. ಅಭಾವಕಾಲದ ದರ ಹೆಚ್ಚಳದ ಸಮಯದಲಲಿ ಉಪಯೋಗಿಸಲು ಈರುಳ್ಳಿ ಖರೀದಿಸುವ ಪ್ರಕ್ರಿಯೆಯಲ್ಲಿ ಈ ವರೆಗಿನ ಸಂಗ್ರಹ 20 ಸಾವಿರ ಟನ್ ಮುಟ್ಟಿದೆಯೆನ್ನಲಾಗಿದ್ದು ನಿಗದಿತ ಗುರಿ ಸಾಧಿಸಲಾಗಿದೆಯೆಂದು ಆಹಾರ ಮತ್ತು ಗ್ರಾಹಕ ವ್ಯವಹಾರ ಸಚಿವ ರಾಮ್ ವಿಲಾಸ್ ಪಾಸ್ವಾನ್ ತಿಳಿಸಿದ್ದಾರೆನ್ನಲಾಗಿದೆ. ನೋಡಲ್ ಏಜೆನ್ಸಿಗಳ ಮೂಲಕ ಕೆ.ಜಿ. ಗೆ ರೂ.10ರಂತೆ ಈರುಳ್ಳಿ ಖರೀದಿಸಲಾಗಿದೆಯೆನ್ನಲಾಗಿದೆ. ಅಭಾವ ತಲೆದೊರಿ ದರ ಹೆಚ್ಚಳವಾದಾಗ ಇದನ್ನು ಮಾರುಕಟ್ಟೆಗೆ ಪೂರೈಸಲಾಗುವುದೆನ್ನಲಾಗಿದೆ.